ಶ್ರೀ ಮಹ್.ಜಿ. ಗೂಳಿಹಂಜೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಶ್ವ ಬ್ಯಾಂಕ್ ನೆರವಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿ

745 - ಶ್ರೀ ಇ. ಮಾರುತಿರಾವ ಪವಾರ (ಸರ-ಎಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆಗೂ ವಿಶ್ವಬ್ಯಾಂಕಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿಗಾಗಿ ಎಷ್ಟು ಹಣ ಬಂದಿದೆ. ಆ ಹಣವನ್ನು ಯಾವ ಯಾವ ಕಾಲೇಜಿನ ಅಭಿವೃದ್ಧಿಗಾಗಿ ಕೊಟ್ಟಿದೆ.

ಆ) ಅಭಿವೃದ್ಧಿಯ ಕಾರ್ಯವನ್ನು ಸರ್ಕಾರ ಪರಿಶೀಲಿಸಿದೆಯೇ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಪಾಲಿಟೆಕ್ನಿಕ್ ಹಂತದಲ್ಲಿ ತಾಂತ್ರಿಕ ಶಿಕ್ಷಣದ ಗುಣಮಟ್ಟ ಬಲಪಡಿಸಲು ರೂ. 4660-00 ಲಕ್ಷ ಮೊತ್ತದ ವಿಶ್ವ ಬ್ಯಾಂಕ್ ಯೋಜನೆಯನ್ನು 1990-91ನೇ ಸಾಲಿನಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಸದರಿ ಯೋಜನೆಯಲ್ಲಿ ಜನವರಿ 1996ರ ಅಂತ್ಯದವರಗೆ ರೂ. 2878.00 ಲಕ್ಷ ಹಣ ಖರ್ಚಾಗಿದ್ದು ಇದುವರೆಗೂ ರೂ. 1978.64 ರಷ್ಟು ಹಣ ವಿಶ್ವಬ್ಯಾಂಕಿನಿಂದ ರಾಜ್ಯ ಸರ್ಕಾರಕ್ಕೆ ಮರುಪಾವತಿಯಾಗಿದೆ.

ರಾಜ್ಯದಲ್ಲಿ ಪ್ರೌಢಶಾಲೆಗಳ ಮಂಜೂರಾತಿ

746 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಪ್ರೌಢಶಾಲೆಗಳು ಯಾವುವು (ಮಂಜೂರಾದಲ್ಲಿ ವಿವರ ತಿಳಿಸುವುದು)

ಆ) ಹಾಗಿಲ್ಲದಿದ್ದಲ್ಲಿ 1996-97ನೇ ಸಾಲಿನಲ್ಲಿ ಎಷ್ಟು ಪ್ರೌಢಶಾಲೆಗಳು ಮಂಜೂರು ಮಾಡುವ ಯೋಜನೆ ಸರಕಾರದ ಮುಂದಿದೆ.

ಇ) ಹಾಗಿದ್ದಲ್ಲಿ ಯಾವ ಯಾವ ಕಡೆಗಳಲ್ಲಿ ಮಂಜೂರು ಮಾಡಲಾಗುವುದು.

ಶ್ರೀ ಮಹ್. ಜಿ. ಗೂಳಿಹಂಜೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುವುದಿಲ್ಲ.

ಅ) 1996-97ನೇ ಸಾಲಿನಲ್ಲಿ 200 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಉದ್ದೇಶ ಹೊಂದಲಾಗಿದೆ.

ಆ) ಸರ್ಕಾರಕ್ಕೆ ಬಂದಿರುವ ಬೇಡಿಕೆಗಳನ್ನು ಪರಿಶೀಲಿಸಿ ಅಗತ್ಯತೆಗನುಗುಣವಾಗಿ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಸರಕಾರದ ಅನುಮತಿ ಇಲ್ಲದೆ ನಡೆಯುತ್ತಿರುವ ವಿದ್ಯಾಸಂಸ್ಥೆಗಳು

749 - ಶ್ರೀ ಜಿ.ಜಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಅನುಮತಿಯಿಲ್ಲದ ಹಾಸನ ಜಿಲ್ಲೆಯಲ್ಲಿ ಎಷ್ಟು ಟಿಸಿಹೆಚ್ ಶಾಲೆಗಳು ಇವೆ. ಆ ಶಾಲೆಗಳನ್ನು ರದ್ದುಗೊಳಿಸಲಾಗಿದೆಯೇ ರದ್ದಾಗಿದ್ದಲ್ಲಿ ಅಲ್ಲಿನ ಶಾಲೆಯ ಮಕ್ಕಳ ಭವಿಷ್ಯದ ಬಗ್ಗೆ ಸರ್ಕಾರದ ಕ್ರಮವೇನು;

ಆ) ಈ ಶಾಲೆಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳು ಯಾವುವು ಹಾಗೂ;

ಇ) ಖಾಸಗಿಯವರು ನಡೆಸುತ್ತಿದ್ದಲ್ಲಿ ಅವರ ಹೆಸರು ವಿವರ ಒದಗಿಸುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಅನುಮತಿಯಿಲ್ಲದ 31 ಟಿಸಿಹೆಚ್ ಶಾಲೆಗಳಿದ್ದು ಈಗ ಅವುಗಳನ್ನು ಮುಚ್ಚಿಸಲಾಗಿದೆ. ನಿಗಧಿತ ಅವಧಿಯೊಳಗೆ ಪರೀಕ್ಷಾ ಶುಲ್ಕ ಪಾವತಿ ಮಾಡಿದ್ದ ಅನಧಿಕೃತ ಶಾಲೆಗಳ ವಿದ್ಯಾರ್ಥಿಗಳಿಗಾಗಿ 1995 ಡಿಸೆಂಬರ್ ತಿಂಗಳಲ್ಲಿ ವಿಶೇಷ ಪರೀಕ್ಷೆಗೆ ಅವಕಾಶ ಕಲ್ಪಿಸಿ ಕೊಡಲಾಗಿದೆ.

ಆ) ಅನಧಿಕೃತ ಟಿಸಿಹೆಚ್ ಶಾಲೆಗಳು ಮುಚ್ಚಿಲ್ಪಟ್ಟಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರವಿರುವ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗೈರು ಹಾಜರಾಗುತ್ತಿರುವ ವೈದ್ಯರುಗಳ ಬಗ್ಗೆ

750 - ಶ್ರೀ ಜಿ.ಜಿ. ಶಿವಪ್ಪ (ಸಕಲೇಶಪುರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಲಕಾಲದ ರಜೆ ಪಡೆದು ಅನೇಕ ವರ್ಷಗಳಿಂದ ಗೈರು ಹಾಜರಾಗಿರುವ ವೈದ್ಯರುಗಳೆಷ್ಟು?

ಆ) ಇವರಲ್ಲಿ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದೆ ಹಾಗೂ ಕೈಗೊಂಡ ಕ್ರಮಗಳೇನು?

ಇ) ಉಳಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು? ಯಾವಾಗ ಕ್ರಮ ಕೈಗೊಳ್ಳಲಾಗುವುದು? ಇವರಲ್ಲಿ ಅವಶ್ಯಕತೆಗಳಿಗೆ ತರಳಿ ಸಲಸಿರುವ ವೈದ್ಯರ ಸಂಖ್ಯೆ